# ಓದುಗರ ಸ್ಪಂದನ

## ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ

**ಮ**ಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಜವಾಬ್ದಾರಿ ಅತ್ಯಂತ ಗುರುತರವಾದುದು. ಮಕ್ಕಳ ತೊದಲು ನಾಲಿಗೆಯಿಂದ ಇಂಗ್ಲಿಷ್ ಉಚ್ಚಾರಣೆಯನ್ನೇ ಕಾಯುತ್ತಾ ಕುಳಿತಿರುವ ಇಂದಿನ ತಂದೆತಾಯಿಗಳು ಮಕ್ಕಳ ಬಗೆಗಿನ ತಮ್ಮ ಜವಾಬ್ದಾರಿಯನ್ನು ಮೊಟಕುಗೊಳಿಸಿಕೊಂಡಿದ್ದಾರೆ. ಇದು ತಮ್ಮ ಅನುಕೂಲಕ್ಕಾಗಿಯೋ ಅಥವಾ ತಮ್ಮ ಮಕ್ಕಳ ಭವಿಷ್ಯಕ್ಕಾಗಿಯೊ ಎಂಬುದು ಪ್ರಶ್ನೆ. ಬದುಕಿಗೆ ಮಾರಕವಾದ ಶಿಕ್ಷಣ ಪಡೆಯುವ ಸಲುವಾಗಿ ನಾವು ನಮ್ಮ ಸಂಸ್ಕೃತಿಯನ್ನು ಮತ್ತು ಪ್ರಕೃತಿಯನ್ನು ಹೊರತಾಗಿಸುವುದು ಅನೈತಿಕವಾದುದು. Nature is a teacher ಎಂದು ವರ್ಡ್ಸ್‌ವರ್ತ್ ತನ್ನ ಕಾವ್ಯದಲ್ಲಿ ತಿಳಿಸಿರುವಂತೆ ಆ ಪ್ರಕೃತಿಯೂ ಒಂದು ಗುರು ಎಂಬ ಅರಿವನ್ನು ಮೂಡಿಸುವುದು ತಂದೆತಾಯಿಗಳ ಕರ್ತವ್ಯ. ತಮ್ಮ ಮಕ್ಕಳನ್ನು ಕಾನ್ವೆಂಟ್ ಶಿಶುವಿಹಾರಗಳಲ್ಲಿ ಬಿಟ್ಟು ತಮ್ಮ ಮಕ್ಕಳ ಮೇಲಿನ ಜವಾಬ್ದಾರಿಯನ್ನು ಕಳೆದುಕೊಳ್ಳುವ ತಂದೆತಾಯಿಗಳಿಗೆ ಇದು ಅಸಾಧ್ಯವಾದ ಕಾರ್ಯ.

ಪ್ರಕೃತಿಯು ಅವರಿಗೆ ಅನುಭವವನ್ನು ಕಲಿಸುವ ಪ್ರಯೋಗ ಶಾಲೆಯಾಗಿರಬೇಕು. ಇನ್ನು ಅಧ್ಯಾತ್ಮವನ್ನು ಪರಿಗಣಿಸಿದರೆ ಅದು ಮಕ್ಕಳ ಬೌದ್ಧಿಕ ಮಟ್ಟವನ್ನು ಹೆಚ್ಚಿಸಲು ಮೇಲೆ ತಿಳಿಸಿರುವುದಕ್ಕಿಂತಲೂ ಬಹಳ ಪ್ರಭಾವಶಾಲಿಯಾದ ಅಸ್ತ್ರ. ಮಕ್ಕಳಲ್ಲಿ ಅಧ್ಯಾತ್ಮದ ಬಗ್ಗೆ ಒಲವು ಮೂಡಿಸುವುದರಿಂದ ಅದು ಅವರಲ್ಲಿ ನಮ್ರತಾ ಭಾವನೆಯನ್ನೂ ಭಕ್ತಿಯನ್ನೂ ಅಂಕುರಿಸುತ್ತದೆ. ಮುಂದೆ ಅದು ಅವರ ಜೀವನ ಪಥವಾಗಿ ಅದರಿಂದ ವಿಶ್ವಶಾಂತಿಯನ್ನು ಬಯಸುವ, ಅಲೌಕಿಕ ಪಥದಲ್ಲಿ ಸಾಗುವ ಮಹಾನ್ ವ್ಯಕ್ತಿಯಾಗಿ ರೂಪುಗೊಳ್ಳಲು ಪೂರಕವಾಗುತ್ತದೆ. ತಂದೆತಾಯಿಗಳು ತಮ್ಮ ಮಕ್ಕಳಿಗೆ ಯಾವ ರೀತಿಯಲ್ಲೇ ಶಿಕ್ಷಣ ಒದಗಿಸಿದರೂ ಅದು ಪ್ರಕೃತಿಯ ಬಗ್ಗೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡುಹೋಗುವ ಜ್ಞಾನವನ್ನು ನೀಡುವುದಾಗಿರಬೇಕು. ಇದೊಂದು ಶಿಕ್ಷಣಕ್ರಮವೆಂದು ಭಾವಿಸದೆ ಜೀವನಕ್ರಮವೆಂದು ಭಾವಿಸಿದಾಗ ಮಾತ್ರ ಇನ್ನೂ ಸುಲಭವಾಗಿ ಈ ಕಾರ್ಯವನ್ನು ಸಾಧಿಸಬಹುದು.

ಮನುಕುಲದ ಜನ್ಮಕ್ಕೆ ಕಾರಣವಾದ ಹಾಗೂ ಪಂಚಭೂತಗಳಲ್ಲಿ ಒಂದಾದ ಮಣ್ಣಿನಲ್ಲಿ ಮಕ್ಕಳು ಆಡುವುದು ಇಂದಿನ ತಂದೆತಾಯಿಗಳಿಗೆ ಅಲರ್ಜಿ. ದ್ವಾಪರಯುಗದ ಶ್ರೀಕೃಷ್ಣನ ಕಥಾವಳಿಯಲ್ಲೂ ಇದೊಂದು ಮನರಂಜನಾತ್ಮಕ ಪ್ರಸಂಗ. ಅಲ್ಲಿ ಶ್ರೀಕೃಷ್ಣ ತಾಯಿ ಗದರಿದಳೆಂದು ಮಣ್ಣುತಿಂದ ಬಾಯಿಯನ್ನು ತೆರೆದು ಬ್ರಹ್ಮಾಂಡದರ್ಶನ ನೀಡಿ ತಾಯಿಯನ್ನು ದಿಗ್ಭ್ರಾಂತಗೊಳಿಸಿದ. ಆದರೆ ಕಲಿಯುಗದ ಅದರಲ್ಲೂ ೨೧ನೆಯ ಶತಮಾನದ ಮಕ್ಕಳು ಮಣ್ಣು ಮುಟ್ಟಿ, ಛಡಿ ಏಟು ತಿಂದು ಭಾವಾಭಿವ್ಯಕ್ತಿಗೆ ಅವಕಾಶವಿಲ್ಲದೆ ಕೂಪಮಂಡೂಕಗಳಾಗಿವೆ ಅಷ್ಟೆ. ಈ ತೆರನಾದ ತಂದೆ ತಾಯಿಗಳ ವರ್ತನೆ ಮಕ್ಕಳಿಗೆ ತನ್ನತನವನ್ನು ರೂಪಿಸಿಕೊಳ್ಳಲು ತಡೆಗೋಡೆಯನ್ನು ನಿರ್ಮಿಸುತ್ತದೆ.

ಈ ಮೇಲಿನ ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಹೇಳುವುದಾದರೆ ಇಂದಿನ ತಂದೆತಾಯಿಗಳು ತಮ್ಮ ಮಕ್ಕಳಿಗಾಗಿ ತಮ್ಮ ಸಮಯವನ್ನು ನೀಡಿ, ಪ್ರೀತಿ ವಾತ್ಸಲ್ಯವನ್ನು ಧಾರೆಯೆರೆದು ಅವರ ಉಜ್ವಲ ಭವಿಷ್ಯಕ್ಕೆ ನಂದಾದೀಪವಾಗಿ ಬೆಳಗಬೇಕು. ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಹಣ ಸಂಗ್ರಹಿಸುವ ಗುರಿಯನ್ನೊಂದೇ ಇಟ್ಟುಕೊಳ್ಳದೆ, ತಮ್ಮ ಮಕ್ಕಳು ತಂದೆ ತಾಯಿಗಳ ಸಾನ್ನಿಧ್ಯಕ್ಕಾಗಿ ಎಂದೂ ಚಡಪಡಿಸದೇ ಇರುವಂತೆ ನೋಡಿಕೊಳ್ಳುವ ಗುರಿಯನ್ನೂ ಹೊಂದಿರಬೇಕು. ತಂದೆ ತಾಯಿಗಳು ಎಂದೂ ತಮ್ಮ ಮಕ್ಕಳಿಗೆ 'ಸಮಯದ ಬೆಲೆ'ಯನ್ನು ತನ್ನ ತಂದೆಗೆ ತಿಳಿಸಿಕೊಟ್ಟ 'ಮಾರ್ಟಿನ್' (ವಿವೇಕಪ್ರಭ, ಅಕ್ಟೋಬರ್, ೨೦೦೨)ನ ಅವಸ್ಥೆ ಬಂದೊದಗಲು ಅವಕಾಶ ಕಲ್ಪಿಸಿ ಕೊಡಬಾರದು. **—ಚೈತಾಲಿ, ಪಿ.ಎಂ. ತಾಳಗುಪ್ಪ, ಸಾಗರ.**

**ಮೂ**ರುವರುಷದ ಬುದ್ಧಿ ನೂರುವರುಷದ ತನಕ ಎಂಬ ಗಾದೆಮಾತಿನಂತೆ ಮಗು ಮೂರುವರುಷದ ಪ್ರಾಯದಿಂದಲೇ ಎಲ್ಲ ಒಳ್ಳೆ ಅಂಶಗಳನ್ನು ವಯೋಗುಣಕ್ಕನುಗುಣವಾಗಿ ಬೆಳೆಸುತ್ತಾ ಹೋಗಬೇಕು.

ಇನ್ನು ಮಗು ಶಾಲೆಗೆ ಹೋಗಲು ಪ್ರಾರಂಭಿಸಿದ ನಂತರ ತಮ್ಮ ಜವಾಬ್ದಾರಿ ಮುಗಿಯಿತೆಂದು ಸಂಪೂರ್ಣ ಜವಾಬ್ದಾರಿ ಶಿಕ್ಷಕರ ಮೇಲೆ ಬಿಡದೆ ತಂದೆತಾಯಿಗಳೂ ಅವರ ಅಭ್ಯಾಸದ ಕಡೆ ಗಮನಹರಿಸಬೇಕು. ಯಾವುದೇ ಮಗುವು ತಪ್ಪು ಮಾಡಿದಾಗ ಅದರ ತಂದೆತಾಯಿಗಳೇ ಆಗಲಿ, ಶಿಕ್ಷಕರೇ ಆಗಲಿ ಅವರನ್ನು ಹೊಡೆದು ಶಿಕ್ಷಿಸಿ ಅವರನ್ನು ತಿದ್ದುವ ಪ್ರಯತ್ನಕ್ಕಿಂತ ಮೃದುವಾದ ಮಾತಿನಿಂದ ಅವರಿಗೆ ಅರ್ಥವಾಗುವ ಹಾಗೆ ಹಿತ ನುಡಿಗಳನ್ನು ಹೇಳಬೇಕು. ನೀನು ಇಡುತ್ತಿರುವುದು ತಪ್ಪುಹೆಜ್ಜೆ ಎಂದು ಅವರಿಗೆ ಮನವರಿಕೆ ಮಾಡಿಕೊಡಬೇಕು.

ಇನ್ನು ಕೆಲವು ಮಕ್ಕಳಲ್ಲಿ ಅವರ ಬುದ್ಧಿಸಾಮರ್ಥ್ಯ ಹೆಚ್ಚು, ಹಾಗೆಯೇ ಕೆಲ ಮಕ್ಕಳಲ್ಲಿ ಬುದ್ಧಿಸಾಮರ್ಥ್ಯ ಕಡಿಮೆ. ಹಾಗಿರುವಾಗ ಕೆಲ ತಂದೆತಾಯಿಗಳು ತಮ್ಮ ಮಕ್ಕಳನ್ನು ಬೇರೆ ಮಕ್ಕಳೊಂದಿಗೆ ಹೋಲಿಸಿ ಅವನನ್ನು ನೋಡು ಎಷ್ಟು ಬುದ್ಧಿವಂತ ನೀನು ದಡ್ಡ ಎಂದು ಹೇಳಿ ಮಕ್ಕಳ ಸೂಕ್ಷ್ಮ ಮನಸ್ಸನ್ನು ನೋಯಿಸುತ್ತಾರೆ. ಹಾಗೆ ಮಾಡಿದಾಗ ಮಕ್ಕಳು ಮನಸ್ಸಿನಲ್ಲಿ

ತಾನು ದಡ್ಡ ಎಂದು ತಿಳಿದು ತಮ್ಮಲ್ಲಿಯೇ ಒಂದು ರೀತಿಯ ಕೀಳರಿಮೆ ಬೆಳೆಸಿಕೊಳ್ಳುತ್ತಾರೆ. ಆ ಮಕ್ಕಳು ತಮ್ಮಲ್ಲಿ ಇದ್ದ ಪ್ರತಿಭೆಯನ್ನೂ ಹೊರಪಡಿಸಲು ಹಿಂಜರಿಯುತ್ತಾರೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ನೋಡಿ ತಂದೆತಾಯಿಯರು ಮಕ್ಕಳಿಗೆ ಪ್ರೋತ್ಸಾಹ ಕೊಡಬೇಕು. ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಅವರ ಪ್ರತಿಭೆಯನ್ನು ನೋಡಿ ಸಂತೋಷಿಸಬೇಕು.

—ಕುಮಾರಿ ಮಂಗಲಾ ಅನಂತ ಹೆಗಡೆ. ಶಿರ್ಸಿ

ಮಕ್ಕಳಲ್ಲಿ ಕಾಣಬಹುದಾದ ಲೋಪದೋಷಗಳಿಗೂ, ಸದ್ವರ್ತನೆಗಳಿಗೂ ಶಾಲೆ, ಸಮಾಜ, ಮಾಧ್ಯಮಗಳಂತೆ ತಂದೆ ತಾಯಿಗಳೂ ಕಾರಣರು. ತಂದೆತಾಯಿಗಳು ತಮ್ಮ ಮಕ್ಕಳನ್ನು ಒಳ್ಳೆಯದೊಂದು ಶಾಲೆ ಅಥವಾ ಕಾಲೇಜಿಗೆ ಸೇರಿಸಿಬಿಟ್ಟರೆ ತಮ್ಮ ಜವಾಬ್ದಾರಿ ಮುಗಿಯಿತೆಂದು ಭಾವಿಸುತ್ತಾರೆ. ಅಲ್ಲಿ ವಿಷಯಬೋಧನೆಗೆ ಮಾತ್ರ ಪ್ರಾಧಾನ್ಯವಿರುತ್ತದೆ. ನೈತಿಕತೆ, ವ್ಯಕ್ತಿತ್ವವಿಕಸನಕ್ಕೆ ಸಂಬಂಧಿಸಿದಂತೆ ಏನನ್ನೂ ಕಲಿಸಲಾಗುವುದಿಲ್ಲ. ಈ ದಿಶೆಯಲ್ಲಿ ತಂದೆತಾಯಿಗಳೇ ಪ್ರಧಾನಪಾತ್ರ ವಹಿಸಬೇಕಾದುದು ಇಂದಿನ ಅಗತ್ಯವಾಗಿದೆ. ಮಕ್ಕಳು ಹೊಂದಿರುವ ಸಹವಾಸ, ಹವ್ಯಾಸಗಳನ್ನು ಎಚ್ಚರದಿಂದ ಗಮನಿಸುತ್ತಿದ್ದು ಲೋಪವಿದ್ದಲ್ಲಿ ತಿಳಿಯಹೇಳಬೇಕು. ಅವರ ದೈಹಿಕ-ಮಾನಸಿಕ ಆರೋಗ್ಯದಲ್ಲಿ ಲೋಪದೋಷಗಳಿದ್ದರೆ, ಸರಿಯಾದ ವೈದ್ಯರೊಡನೆ ಸಮಾಲೋಚಿಸಿ ಸೂಕ್ತ ಚಿಕಿತ್ಸೆ ಕೊಡಿಸಬೇಕು.

ಉಪದೇಶಕ್ಕಿಂತ ಆಚರಣೆ ಶ್ರೇಷ್ಠ. ಆದ್ದರಿಂದ ತಮ್ಮ ವ್ಯಕ್ತಿತ್ವದಲ್ಲಿರುವ ದೋಷಗಳನ್ನು ಅಂತರ್ದರ್ಶನ (Introspection)ದಿಂದ ಕಂಡುಕೊಂಡು ತಿದ್ದಿಕೊಳ್ಳಬೇಕು. ಆಗ ಮಾತ್ರ ಅವರ ಉಪದೇಶ ಅರ್ಥಪೂರ್ಣವಾಗುತ್ತದೆ. ಸಮಯ ಸಿಕ್ಕಿದಾಗ ಅಥವಾ ದಿನಕ್ಕೆ ಕನಿಷ್ಠ ಅರ್ಧಗಂಟೆ ನಿಗದಿಪಡಿಸಿಕೊಂಡು ಮಕ್ಕಳಿಗೆ ಇಂದಿನ ಸಮಾಜದಲ್ಲಿರುವ ಪಿಡುಗುಗಳ ಬಗ್ಗೆ ಮತ್ತು ಅವುಗಳಿಂದಾಗುತ್ತಿರುವ ಹಾನಿಯ ಬಗ್ಗೆ ತಿಳಿಸಬೇಕು. ಸಮಾಜಸುಧಾರಕರು, ದೇಶಭಕ್ತರು ಮತ್ತು ಧರ್ಮಸಂಸ್ಥಾಪಕರ ಉಪದೇಶಗಳ ಸಾರ, ಅವರ ತ್ಯಾಗ ಮತ್ತು ದೇಶಾಭಿಮಾನಗಳ ವಿಷಯ ತಿಳಿಸಿ, ತಾವು ಶ್ರೇಷ್ಠವ್ಯಕ್ತಿಗಳಾಗಬೇಕೆಂಬ ನಿರ್ಧಾರವನ್ನು ಬೆಳೆಸಬೇಕು.

ಮನೆಯಲ್ಲಿರುವ ಎಲ್ಲ ಮಕ್ಕಳನ್ನೂ ಸಮಾನವಾಗಿ ಕಾಣಬೇಕು. ಇಲ್ಲವಾದಲ್ಲಿ ಅವರು ಪರಸ್ಪರ ದ್ವೇಷಾಸೂಯೆಗಳನ್ನು ಬೆಳೆಸಿಕೊಂಡು ಸಮಾಜಕ್ಕೂ ಕಂಟಕಪ್ರಾಯರಾಗುತ್ತಾರೆ. ಬಿಡುವಿನಲ್ಲಿ ನೀತಿಕಥೆಗಳ ಪುಸ್ತಕಗಳನ್ನು ಓದಲು, ದೂರದರ್ಶನದಲ್ಲಿ ಬರುವ ಬೋಧಪ್ರದ ಕಾರ್ಯಕ್ರಮಗಳನ್ನು ವೀಕ್ಷಿಸಲು ಪ್ರೋತ್ಸಾಹಿಸಬೇಕು. ರಜಾ ಅವಧಿಯಲ್ಲಿ ವ್ಯಕ್ತಿತ್ವವಿಕಸನಶಿಬಿರ ಮತ್ತು ಶ್ರಮದಾನಶಿಬಿರಗಳಲ್ಲಿ ಭಾಗವಹಿಸಲು ಅನುವು ಮಾಡಿ ಕೊಡಬೇಕು. ಇದರಿಂದ ದೇಹಶ್ರಮದಿಂದಾಗುವ ಪ್ರಯೋಜನ ಮತ್ತು ವಿವಿಧ ಜಾತಿ-ಮತ-ವರ್ಗಗಳ ಮಕ್ಕಳ ಜೊತೆ ಸಹಬಾಳ್ವೆ ನಡೆಸುವ ಅನುಭವ ಮತ್ತು ಆವಶ್ಯಕತೆಗಳ ಅರಿವು ಮೂಡುತ್ತದೆ. ಭವ್ಯಭಾರತದ ನಿರ್ಮಾಣದ ನಮ್ಮೆಲ್ಲರ ಕನಸು ನನಸಾಗಬೇಕಾದರೆ, ಇಂದಿನ ಮಕ್ಕಳು ಪ್ರಾಮಾಣಿಕರೂ, ದೇಶಾಭಿಮಾನಿಗಳೂ ಆದ ಪ್ರಜೆಗಳಾಗಿ ರೂಪುಗೊಳ್ಳಬೇಕು. ಈ ದಿಶೆಯಲ್ಲಿ ಎಲ್ಲ ತಂದೆ ತಾಯಿಯರೂ ಕಾರ್ಯಪ್ರವೃತ್ತರಾಗುವರೆಂದು ಆಶಿಸೋಣ.

ಕೆ.ಎಮ್. ಸೀತಾರಾಮಶಾಸ್ತ್ರೀ
ನಿವೃತ್ತ ಹಿರಿಯ ಪ್ರಾ. ಶಾಲೆಯ ಮುಖ್ಯ ಶಿಕ್ಷಕರು,ಕಳಸಾಪುರ

ಮಕ್ಕಳ ಭವಿಷ್ಯವು ತಂದೆತಾಯಿಯರನ್ನೇ ಅವಲಂಬಿಸಿದೆ ಎಂಬುದನ್ನು ಮನಗಂಡಾಗ ಅವರ ಪಾತ್ರ ಎಷ್ಟು ಗುರುತರವಾದದ್ದು ಎಂಬಂಶ ಮನವರಿಕೆಯಾಗುತ್ತದೆ. ಆದರೆ ತಲೆಮಾರಿನಿಂದ ತಲೆಮಾರಿಗೆ, ಕಾಲಕಾಲಕ್ಕೆ ಅನೇಕ ವ್ಯತ್ಯಾಸ ಮಾರ್ಪಾಡುಗಳು, ವಿಭಿನ್ನ ಆಸೆ ಆಕಾಂಕ್ಷೆಗಳು ಕಂಡುಬರುವುದು ಸಹಜವಷ್ಟೆ. ಈ ಆಧುನಿಕ ಯುಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ತಾಯಿತಂದೆಗಳು ಕೆಲವು ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ಮಕ್ಕಳ ಉಜ್ವಲ ಭವಿಷ್ಯಕ್ಕೆ ಸತತವಾಗಿ ಶ್ರಮಿಸಿದಲ್ಲಿ, ಅವರ ಶ್ರಮ ಖಂಡಿತ ಸಾರ್ಥಕವಾಗುವುದು.

ಪ್ರಥಮವಾಗಿ ಮಕ್ಕಳಲ್ಲಿ ದೇಶಾಭಿಮಾನ, ಭಾಷಾಭಿಮಾನ, ಆತ್ಮಾಭಿಮಾನವನ್ನು ಬೆಳೆಸಲು ಪೂರಕವಾಗುವ ಕಾರ್ಯಗಳನ್ನು ಅವರು ತಾವು ಮೊದಲು ಮಾಡಿ ತೋರಿಸಬೇಕು. ಸಂಕುಚಿತ ಮನೋಭಾವ ಬೆಳೆಯುವಂತಹ ಪರಿಸರದಲ್ಲಿ ಮಕ್ಕಳು ಬೆಳೆಯದಂತೆ ಎಚ್ಚರಿಕೆ ವಹಿಸಬೇಕು. ನಮ್ಮ ಹಿಂದೂ ಸಂಸ್ಕೃತಿಯ ಅನೇಕ ಘನ ಉದ್ದೇಶ, ಉದಾಹರಣೆಗಳನ್ನು ಮಕ್ಕಳಿಗೆ ಮನದಟ್ಟಾಗುವಂತೆ ವಿವರಿಸಬೇಕು. ಜೊತೆಗೆ ಮಕ್ಕಳಲ್ಲಿ ಮನೋವೈಶಾಲ್ಯತೆ ಬೆಳೆಯಬೇಕಾದರೆ ಜಾತ್ಯತೀತ ಮನೋಭಾವಕ್ಕೆ ಪೂರಕವಾಗಿ, ಇತರ ಎಲ್ಲ ಶ್ರೇಷ್ಠಧರ್ಮಗಳ ಒಳ್ಳೆಯ ಅಂಶಗಳನ್ನೂ ಅವರಿಗೆ ತಿಳಿಯಹೇಳಬೇಕು. ಹೆಚ್ಚು ಹೆಚ್ಚು ಒಳ್ಳೆಯ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಮಕ್ಕಳು ಬೆಳೆಸಿಕೊಳ್ಳಲು ಪ್ರೋತ್ಸಾಹಿಸಬೇಕು. ಜ್ಞಾನದಾಹ ಹೆಚ್ಚಿದಂತೆಲ್ಲ, ಮಕ್ಕಳಲ್ಲಿ ಇನ್ನೂ ಹೆಚ್ಚು ಹೆಚ್ಚು ಓದಬೇಕೆಂಬ, ವಿಷಯಗಳನ್ನು ತಿಳಿಯಬೇಕೆಂಬ ಕುತೂಹಲವನ್ನು ಕೆರಳಿಸುವಂತಹ ಅಂಶಗಳಿಗೆ ಹೆಚ್ಚು ಒತ್ತು ಕೊಡಬೇಕು. ಆದರೆ ಯಾವುದನ್ನೂ ಅತಿಯಾಗಿ ಮಾಡಬಾರದು, ಅಥವಾ ಒತ್ತಡ ಹೇರಿ ಅವರಲ್ಲಿ ದ್ವೇಷ, ಅಸೂಯೆಗಳ ಉಗಮಕ್ಕೆ ಕಾರಣರಾಗಬಾರದು.

ತಂದೆತಾಯಿಯರು ತಮ್ಮ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ತಮ್ಮ ಮಕ್ಕಳ ಮೂಲಕ ತೀರಿಸಿಕೊಳ್ಳಲು ಖಂಡಿತಾ ಎಂದಿಗೂ ಪ್ರಯತ್ನಿಸಬಾರದು. ಮಕ್ಕಳಿಗೆ ಇಷ್ಟವಿಲ್ಲದಿದ್ದರೂ, ತಮಗೆ ಇಷ್ಟವಿರುವ ನಿಟ್ಟಿನಲ್ಲಿ ಓದುವುದಕ್ಕೆ ಒತ್ತಾಯಿಸುವುದು ಸರಿಯಲ್ಲ. ಇತರ ಆಟೋಟಗಳು, ಲಲಿತಕಲೆಗಳು, ಮನರಂಜನಾ ಕಾರ್ಯಕ್ರಮಗಳು ಇತ್ಯಾದಿ ಸಂಪೂರ್ಣವಾಗಿ ಮಕ್ಕಳ ಓದುವಿಕೆಗೆ ಮಾರಕ ಎಂಬ ಭಾವನೆ ಹೊಂದಿರುವ ತಂದೆ

ತಾಯಿಗಳು, ಮಕ್ಕಳು ಆ ವಿಷಯಗಳನ್ನು ಪ್ರಸ್ತಾಪಿಸಿದರೂ ಕೂಡ ಬಹಳ ನಿಷ್ಠುರತೆಯಿಂದ ಅವರನ್ನು ಗದರಿಸಿ, ಬೆದರಿಸಿ ಆ ವಿಷಯಗಳ ಕಡೆ ಗಮನವನ್ನೇ ಹರಿಸದಷ್ಟು ಕಟುವಾಗಿ ವರ್ತಿಸಿ, ಮಕ್ಕಳ ಮನಸ್ಸಿನಲ್ಲಿ ಮೂಡುವ ಅನೇಕ ಕಲಾ ಕುಶಲತೆಗಳನ್ನು ಚಿಗುರಿನಲ್ಲೇ ಚಿವುಟಿಹಾಕಿಬಿಡುವುದಂತೂ ಬಹಳ ತಪ್ಪು. ಬದಲಾಗಿ ಮಕ್ಕಳನ್ನು ಸ್ನೇಹಿತರಂತೆ ಕಂಡು, ಅವರಲ್ಲಿ ಹುದುಗಿರುವ ಕಲಾನೈಪುಣ್ಯವನ್ನು ಪೋಷಿಸಿ ಅವರ ಕುಶಲತೆಯನ್ನು ಹೊರತೆಗೆದು, ಆ ಮಕ್ಕಳು ದೇಶಕ್ಕೆ ಶ್ರೇಷ್ಠ ಕೊಡುಗೆಯಾಗಬಲ್ಲವರಂತೆ ಮಾಡುವುದು ತಂದೆತಾಯಿಗಳ ಕೈಯಲ್ಲಿ ಮಾತ್ರವಿದೆ. ಇದು ಅವರ ಆದ್ಯಕರ್ತವ್ಯವೂ ಹೌದು. ಅತಿ ಕಾಠಿಣ್ಯ ಅಥವಾ ಅತಿ ಸದರ ಎರಡೂ ಮಾರಕ ಎಂಬುದನ್ನು ತಾವೂ ಅರಿತು, ಮಕ್ಕಳಲ್ಲೂ ಈ ಅರಿವು ಮೂಡುವಂತೆ ಪ್ರೋತ್ಸಾಹಿಸಬೇಕು. ಮಕ್ಕಳಿಗಾಗಿ ತಾವು ಎಂತಹ ತ್ಯಾಗಕ್ಕೂ ಸಿದ್ಧರಾಗಬೇಕು. ತಮ್ಮಲ್ಲಿರುವ ದೋಷಗಳನ್ನು ಮಕ್ಕಳು ಎತ್ತಿ ತೋರಿಸಿದಾಗ ಉದ್ವಿಗ್ನರಾಗದೆ, ದುರಭಿಮಾನವಿಲ್ಲದೆ, ತಪ್ಪು ನಿಜಕ್ಕೂ ತಪ್ಪೇ ಎಂಬುದನ್ನು ಮನಗಂಡು, ಒಪ್ಪಿಕೊಂಡು ಆ ತಪ್ಪನ್ನು ಪುನಃ ಮಾಡದಿದ್ದಲ್ಲಿ ಮಕ್ಕಳ ದೃಷ್ಟಿಯಲ್ಲಿ ಅವರು ಆದರ್ಶಪ್ರಾಯರಾಗುವುದರಲ್ಲಿ ಸಂದೇಹವೇ ಇಲ್ಲ. ಈ ಕೆಲವು ಅಂಶಗಳನ್ನು ತಂದೆತಾಯಿಗಳು ಗಮನದಲ್ಲಿಟ್ಟುಕೊಂಡಲ್ಲಿ ತಮ್ಮ ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ಖಂಡಿತಾ ಯಶಸ್ವಿಯಾಗುತ್ತಾರೆ.

—ಶ್ರೀಮತಿ ಇಂದಿರಾ ಗೋವಿಂದ, ಮೈಸೂರು.

**ತಂ**ದೆತಾಯಿಗಳು ಮಕ್ಕಳಿಂದ ಏನನ್ನು ನಿರೀಕ್ಷಿಸುತ್ತಾರೋ ಮೊದಲು ಅವರು ಅವುಗಳನ್ನು ಪಡೆದಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ತಂದೆತಾಯಿಗಳ ಮತ್ತು ಮಕ್ಕಳ ನಡುವೆ ಆತ್ಮವಿಶ್ವಾಸ, ನಂಬಿಕೆ, ಅಭಿಮಾನ ಮುಖ್ಯವಾದ ಅಂಶಗಳು. ಮಕ್ಕಳ ಮೊದಲಿನ ೧೬ ರಿಂದ ೧೮ ವರ್ಷಗಳು ಅವರ ಭವಿಷ್ಯಜೀವನವನ್ನು ರೂಪಿಸುವ ಮಹತ್ವದ ಕಾಲವಾಗಿರುವುದರಿಂದ ಅಲ್ಲಿಯವರೆಗೆ ತಂದೆತಾಯಿಗಳು ಪ್ರೀತಿವಾತ್ಸಲ್ಯದ ಜೊತೆಗೆ ಸದಾ ಅವರ ಚಟುವಟಿಕೆಗಳನ್ನು ಗಮನಿಸುತ್ತಾ, ಕಾಲಕ್ಕೆ ತಕ್ಕಂತೆ ಅವರ ವಯಸ್ಸಿಗೆ ಅನುಗುಣವಾಗಿ ಸೂಕ್ತ ಮಾರ್ಗದರ್ಶನ ಮಾಡುತ್ತಾ ತಮ್ಮ ಜೊತೆಯಲ್ಲಿಯೇ ಬೆಳೆಸುವುದು ಸೂಕ್ತವಾದ ಅಂಶವಾಗಿದೆ. ಮಗುವಿನ ಚಿಕ್ಕವಯಸ್ಸಿನ ಪ್ರಾರಂಭದ ವರ್ಷಗಳಲ್ಲಿ ತಂದೆತಾಯಿಗಳು ಹೆಚ್ಚು ಸಮಯವನ್ನು ಅಂದರೆ ಊಟ, ತಿಂಡಿ, ಆಟ, ಓದುವುದು ಮುಂತಾದುವುಗಳಲ್ಲಿ ಅವರೊಡನೆ ಕಳೆದಾಗ ಮಗುವಿಗೆ ತಂದೆತಾಯಿಗಳ ಬಗ್ಗೆ ಆತ್ಮವಿಶ್ವಾಸ, ಅಭಿಮಾನ ಬೆಳೆದು ಹೇಳಿದಂತೆ ಕೇಳಿ, ಕಲಿಸಿದಂತೆ ಕಲಿಯುತ್ತಾರೆ. ತಂದೆತಾಯಿಗಳ ಶಿಸ್ತು, ಕಾಲಪ್ರಜ್ಞೆ, ಜೀವನದ ಕ್ರಮ, ಅನ್ಯೋನ್ಯತೆಯಿಂದ ಬಾಳುವುದು, ಮಗುವಿನ ಮೇಲೆ ಪರಿಣಾಮ ಬೀರುತ್ತವೆ. ಶಾಲೆ ಮತ್ತು ಸಮಾಜದಲ್ಲಿ ನಡೆಯುವ ಪ್ರಕ್ರಿಯೆಗಳು ಮಗುವಿನ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಗ್ರಹಿಸಿ, ಅದರ ಸಮಸ್ಯೆಗಳನ್ನು, ಬೇಕು ಬೇಡಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದುವುಗಳನ್ನು ಈಡೇರಿಸಿ, ಅಸಾಧ್ಯವಾದುವುಗಳ ಬಗ್ಗೆ ಅವನಿಗೆ ಅರಿವನ್ನು ಉಂಟುಮಾಡುವುದರಿಂದ ಮಗುವಿನ ಮಾನಸಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ.

ಲೌಕಿಕ ಪ್ರಪಂಚದ ದುಶ್ಚಟಗಳಿಂದ, ದುರ್ಜನರ ಸಹವಾಸದಿಂದ ಮಕ್ಕಳು ದೂರವಿರುವಂತೆ ತಂದೆತಾಯಿಗಳು ಸದಾ ಎಚ್ಚರಿಕೆ ವಹಿಸಬೇಕು. ತಂದೆತಾಯಿಗಳು ಒಂದು ಮನೆಯನ್ನು ಕಟ್ಟುವಾಗ, ಜಮೀನಿನಲ್ಲಿ ಬೆಳೆಯನ್ನು ತೆಗೆಯುವಾಗ ತೋರಿಸುವ ನಿಷ್ಠೆ, ಶ್ರದ್ಧೆ, ಶ್ರಮ, ಆಸಕ್ತಿಯನ್ನು ಮಕ್ಕಳನ್ನು ಬೆಳೆಸುವುದರಲ್ಲಿ, ಶಿಕ್ಷಣ ಕೊಡಿಸುವುದರಲ್ಲಿ ತೋರಿಸಬೇಕು.

—ಎ.ಜಿ. ಕೃಷ್ಣಪ್ಪ,
ನಿವೃತ್ತ ಶಿಕ್ಷಣಾಧಿಕಾರಿಗಳು, ಹೊನ್ನಾಳಿ

**ಪ್ರ**ತಿಯೊಬ್ಬರ ಜೀವನದಲ್ಲಿ ಮೂರು ಹಂತಗಳಿರುತ್ತವೆ : ಅವು ಮಗಳು-ಮಗ, ಹೆಂಡತಿ-ಗಂಡ, ತಾಯಿ-ತಂದೆ. ಮೂರನೇ ಹಂತದಲ್ಲಿ ತಾಯಿ-ತಂದೆಗಳಾಗಿ ನಮ್ಮ ಜವಾಬ್ದಾರಿ ಗುರುತರವಾದ್ದು. ನಮ್ಮ ಮಕ್ಕಳನ್ನು ನಾವು ಪ್ರಪಂಚಕ್ಕೆ ಬಿಟ್ಟುಹೋಗುತ್ತಿರುವ ಆಸ್ತಿ ಎಂಬುದನ್ನು ಮರೆಯದೆ ನಮ್ಮ ಮಕ್ಕಳಿಗೆ ಜೀವನದ ಮೌಲ್ಯ, ಧ್ಯೇಯ, ಆದರ್ಶಗಳನ್ನು ಪರಿಚಯಿಸಬೇಕು.

"ಮೂರರಲ್ಲಿ ಕಲಿತದ್ದು, ನೂರರ ತನಕ" ಎಂಬಂತೆ ಮಗು ಬಾಲ್ಯದಲ್ಲಿ ತನ್ನ ತಂದೆ-ತಾಯಿಯರನ್ನು ಅನುಕರಿಸುವುದರಿಂದ ನಮ್ಮ ಗುಣ-ನಡತೆಗಳು ಆದರ್ಶವಾಗಿರಬೇಕು. ಮಗುವಿನ ಮನಸ್ಸು ನಿಷ್ಕಲ್ಮಶವಾದ ಹಾಲಿನಂತೆ. ಇಂತಹ ಮನಸ್ಸಿಗೆ ತಾಯಿ-ತಂದೆಗಳು ಶಿಸ್ತು, ತಾಳ್ಮೆ, ಸಂಯಮ, ಸರಳತೆ, ಸತ್ಯ, ನ್ಯಾಯ-ನೀತಿ, ಅಹಿಂಸೆ ನಡತೆಗಳ ಬಗ್ಗೆ ಅರಿವು ಮೂಡಿಸಿ ಮಗುವನ್ನು ಗೌರವಾನ್ವಿತ ಪ್ರಜೆಯನ್ನಾಗಿ ರೂಪುಗೊಳಿಸಬೇಕು. ರಾಷ್ಟ್ರಕವಿ ಕುವೆಂಪು ಹೇಳುವಂತೆ, "ಹುಟ್ಟುತ್ತಾ ಎಲ್ಲರೂ ವಿಶ್ವಮಾನವರೇ, ಆದರೆ ಬೆಳೆಯುತ್ತಾ ಸಮಾಜ ಅವರನ್ನು ಅಲ್ಪಮಾನವರಾಗಿ ಮಾಡುತ್ತದೆ." ಆದ್ದರಿಂದ ತಂದೆತಾಯಿಗಳಾದ ನಾವು ಈ ಸಮಾಜದಲ್ಲಿ ಹುಟ್ಟುತ್ತಾ ವಿಶ್ವಮಾನವನಾದ ಮಗುವನ್ನು ಬೆಳೆಯುತ್ತಲೂ ವಿಶ್ವಮಾನವನಾಗಿಯೇ ಬೆಳೆಸಲು ಪಣ ತೊಡೋಣ.

—ಶ್ರೀಮತಿ ಟಿ.ಎನ್. ಕಲ್ಯಾಣಿ, ಉಪನ್ಯಾಸಕಿ,
ಸರ್ಕಾರಿ ಪದವಿಪೂರ್ವ ಕಾಲೇಜು, ಚಿಕ್ಕಬಳ್ಳಾಪುರ.

ಈ ಲೇಖನದ ಪ್ರಾಯೋಜಕರು : ಶ್ರೀಮತಿ ಎಸ್. ಆರ್. ಸುಮಿತ್ರ, ೪೮೦, ಗುರುಶ್ರೀ, ಈಸ್ಟ್ ಎಂಡ್ ಮೈನ್ ರೋಡ್,
೭ನೆ ಬ್ಲಾಕ್ ಜಯನಗರ, ಬೆಂಗಳೂರು ೫೬೦ ೦೦೯